ಇದನ್ನು ನಾನು ಮರೆಯಲು ಹೇಗೆ ಸಾಧ್ಯ?'

ಹರಿಲಾಲ ಹೇಳುತ್ತಿರುವುದು ಸತ್ಯ ಮತ್ತು ತರ್ಕಬದ್ಧವಾಗಿದೆ ಎಂಬುದು ಠಾಕೂರರಿಗೆ ತಿಳಿದಿತ್ತು. ಅವರು ತಮ್ಮ ಸಾಲ ವಸೂಲಿಯಾಗಲೆಂದು ಯೋಚಿಸಿದ್ದರು. ಹರಿಲಾಲನ ಬಗ್ಗೆ ಎಲ್ಲಾ ವಿಷಯಗಳು, ಅವನ ಈಗಿನ ಪರಿಸ್ಥಿತಿಗಳು ಅವರ ಕಿವಿಗೂ ಬಿದ್ದಿತ್ತು. ತಮ್ಮ ಹಣವನ್ನು ಮರಳಿ ಪಡೆಯುವ ಅವರ ಭಯ ಸಹಜವಾಗಿಯೇ ಇತ್ತು. ಈ ನಡುವೆ ಆಸ್ತಿ ಮಾರಾಟದ ವಿಷಯ ಪ್ರಸ್ತಾಪಕ್ಕೆ ಬಂದಾಗ, ಅವರ ಮನಸ್ಸಿನಲ್ಲಿ ಉಳಿದ ಹಣವನ್ನು ವಸೂಲು ಮಾಡಿಕೊಳ್ಳುವಂಥ ಅವಕಾಶ ಒದಗಿ ಬಂದಿತ್ತು. ಹರಿಲಾಲ ತನ್ನ ಒಪ್ಪಿಗೆಯನ್ನು ಕೊಡಲಾರ, ಶಾಮಲದಾಸರಿಗೆ ಆಸ್ತಿಯನ್ನು ಮಾರುವ ಆತುರವಿದೆ, ತಾವು ಹಣ ವಸೂಲಿ ಮಾಡಿಕೊಂಡು ವ್ಯಾಪಾರವನ್ನು ಪಕ್ಕಾಗೊಳಿಸಬಹುದು ಎಂಬುದು ಠಾಕೂರರ ಯೋಜನೆಯಾಗಿತ್ತು. ಆದರೆ ಅವರ ಯೋಜನೆಯೋಚನೆ ಸುಳ್ಳಾಗಿತ್ತು. ಇದನ್ನೆಲ್ಲಾ ನೋಡಿ ಠಾಕೂರರಿಗೆ ಆಶ್ಚರ್ಯವಾಗಿತ್ತು, ಚಿಂತೆ ಮತ್ತೆ ಕಾಡಿತು.

ಈಗ ಠಾಕೂರರಿಗೆ ಮಾರಾಟ ಪತ್ರಗಳನ್ನು ರಿಜಿಸ್ಟರ್ ಮಾಡದೆ ಬೇರೆ ಮಾರ್ಗವಿರಲಿಲ್ಲ. ಜೋರು, ಜಬರ್ದಸ್ತು ಮಾಡುವುದರಿಂದ ಈ ಚಿಕ್ಕ ಘಟನೆ ಕ್ಷಣ ಮಾತ್ರದಲ್ಲಿ ರಾಷ್ಟ್ರವ್ಯಾಪಿ ಹರಡುವುದು ಎಂಬ ವಿಷಯ ಠಾಕೂರರಿಗೆ ತಿಳಿದಿತ್ತು. ದೇಶಿ ಸಂಸ್ಥಾನಗಳ ಒಳ ವಿಷಯಗಳಲ್ಲಿ ಅಡ್ಡಿಯಾಗಲು, ಸಾಲ ತಿಂದು ಕೂತ ವಿದೇಶಿ ಪೊಲಿಟಿಕಲ್ ಏಜೆಂಟ್‌ಗಳ ಬಗ್ಗೆ ಠಾಕೂರ್ ಸಾಹೇಬರಿಗೆ ಅರಿವಿತ್ತು. ಒಂದು ವೇಳೆ ಹರಿಲಾಲ ಮಾತಿಗೆ ತಪ್ಪಿದರೆ ಶಾಮಲದಾಸರು, ಠಾಕೂರರನ್ನು ಲೆಕ್ಕಿಸದೆ ಪೊಲಿಟಿಕಲ್ ಏಜೆಂಟರನ್ನು ಈ ನಡುವೆ ಎಳೆದು ತರುತ್ತಾರೆ ಎಂಬುದರಲ್ಲಿ ಅನುಮಾನವಿರಲಿಲ್ಲ. ಒಂದು ವೇಳೆ ವಾಸ್ತವವಾಗಿಯೂ ಇದು ಸಂಭವಿಸಿದರೆ ಇಡೀ ದೇಶದಲ್ಲಿ ಈ ಸುದ್ದಿ ವ್ಯಾಪಿಸುವುದು.

***

ಠಾಕೂರರು ಬುದ್ಧಿವಂತಿಕೆಯಿಂದ ಹೆಜ್ಜೆಯಿಟ್ಟರು. ಅವರು ಕಚೇರಿಗೆ ಅಗತ್ಯ ಸೂಚನೆಗಳನ್ನು ಕಳುಹಿಸಿದರು. ಹರಿಲಾಲ ಅಗತ್ಯವಿದ್ದ ಜಾಗಗಳಲ್ಲಿ ರುಜು ಹಾಕಿದ. ಕಡೆಗೆ ಕಬಾ ಗಾಂಧಿಯವರ ಆಸ್ತಿಯ ಮಾರಾಟ ನಿರ್ಧಾರವಾಯಿತು. ಶಾಮಲದಾಸರಿಗೆ ಸಂದ ಬೇಕಾದ ಪೂರ್ಣ ಹಣ ಲಭಿಸಿತು.

ಇಷ್ಟೆಲ್ಲಾ ನಡೆದ ನಂತರ ಹರಿಲಾಲ ಮತ್ತೆ ನಿರುದ್ಯೋಗಿಯಾದ. ಕೆಲಸವಾದ ನಂತರ ಶಾಮಲದಾಸರು ಪೂರ್ಣ ಹಣದೊಂದಿಗೆ ಮರುದಿನವೇ ರಾಜಕೋಟವನ್ನು ಬಿಟ್ಟು ಹೋಗಿದ್ದರು. ಹರಿಲಾಲ ಈಗ ತನ್ನ ಮಕ್ಕಳನ್ನು ಭೇಟಿಯಾಗಲು ಬಯಸುತ್ತಿದ್ದ. ಹರಿಲಾಲನಿಗೆ, ತನ್ನ ಮಕ್ಕಳು ಈಗ ಇಲ್ಲಿಯೇ ನಾದನಿಯ ಬಳಿ ಇದ್ದಾರೋ ಅಥವಾ ಬಾ ಮತ್ತು ಬಾಪೂ ಅವರೊಂದಿಗೆ ಸಾಬರಮತಿ ಆಶ್ರಮದಲ್ಲಿದ್ದಾರೋ ಎಂಬುದು ತಿಳಿದಿರಲಿಲ್ಲ. ಒಬ್ಬ ಇಲ್ಲಿದ್ದು ಇನ್ನೊಬ್ಬ ಸಾಬರಮತಿ ಆಶ್ರಮದಲ್ಲಿರಬಹುದು. ಅವರನ್ನು ಕರೆಯಿಸಿ ತನ್ನೊಂದಿಗೆ ಇಟ್ಟುಕೊಳ್ಳುವ ಪ್ರಸ್ತಾಪವನ್ನು ಬಲಿ ಬಹನ್ ತಪ್ಪಿಸಿದ್ದಳು; ಇದರಿಂದಾಗಿ ಹರಿಲಾಲನಿಗೆ ಅವಳ ಬಗ್ಗೆ ರೋಷವಿತ್ತು. ಬಲಿ ಬಹನ್ ತನ್ನನ್ನು ತಿರಸ್ಕಾರದಿಂದ ನೋಡುತ್ತಾಳೆ ಎಂದು ಹರಿಲಾಲನಿಗೆ ಅನ್ನಿಸುತ್ತಿತ್ತು. ತಾನು ಮದ್ಯವನ್ನು ಸೇವಿಸುವುದು ಅಥವಾ ತನ್ನಿಚ್ಛೆಯಂತೆ ಬದುಕುವುದು ತನಗೆ ಸೇರಿದ್ದು, ಈ ವಿಷಯಗಳಲ್ಲಿ ಅವಳಿಗೆ ತಲೆ ಹಾಕುವ ಹಕ್ಕಿಲ್ಲ ಎಂಬುದು ಅವನ ದೃಢವಿಶ್ವಾಸವಾಗಿತ್ತು. ಸ್ವತಃ ಬಾಪೂ ಸಹ ತನ್ನ ಮಾರ್ಗದಲ್ಲಿ ಅಡ್ಡ ಬರಬಾರದೆಂದು ಅವನು ಪರಿವಾರವನ್ನೂ ತ್ಯಜಿಸಿ ಹೋಗಿದ್ದ.

ಹೀಗಿರುವಾಗ ಬಲಿ ಬಹನಳ ದೊಡ್ಡಸ್ತಿಕೆ ಏನಿದೆ? ತನ್ನ ಮಕ್ಕಳ ಭವಿಷ್ಯದ ಬಗ್ಗೆ ತೀರ್ಮಾನಿಸುವುದು ತನಗೆ ಮಾತ್ರ ಸೇರಿದ್ದು. ಅವಳು ತನ್ನ ಮಕ್ಕಳನ್ನು ತನಗೇಕೆ ಒಪ್ಪಿಸುವುದಿಲ್ಲ? ಅವಳು ಹೀಗೇಕೆ ತನ್ನ ಜೀವನಶೈಲಿಯ ಬಗ್ಗೆ ಪ್ರತಿಕೂಲವಾಗಿ ಮಾತನಾಡುತ್ತಾಳೆ? ಯಾಕೆ ಪತ್ರವನ್ನು ಬರೆಯುತ್ತಾಳೆ? ಇದು ಬಲಿ ಬಹನಳ ದಬ್ಬಾಳಿಕೆಯೇ ಸರಿ...ತಾನೇಕೆ ಅವಳ ಈ ದಬ್ಬಾಳಿಕೆಯನ್ನು ಸಹಿಸಬೇಕು? ಈಗ ಏನು ಮಾಡುವುದು, ಎಲ್ಲಿಗೆ ಹೋಗುವುದು ಎಂದು ಹರಿಲಾಲ ಇನ್ನೂ ನಿರ್ಧರಿಸಿರಲಿಲ್ಲ. ಸಾಮಾನಿನ ಚೀಲದಲ್ಲಿ ಎರಡುಮೂರು ಜೊತೆ ಬಟ್ಟೆಗಳು ಹಾಗೂ ಎರಡುಮೂರು ಮದ್ಯದ ಬಾಟಲಿಗಳಿದ್ದವು. ಸಾಬರಮತಿ ಆಶ್ರಮಕ್ಕೆ ಬಂದಿರುವಂತೆ ದೇವದಾಸನ ಪತ್ರವೂ ಬಂದಿತ್ತು, ಬಾ ಅವರೂ ಸಹ ಇದನ್ನೇ ಬಯಸುತ್ತಿದ್ದರು. ತಾನು ಬಾ ಅವರ ಬಳಿಯಲ್ಲಿರಬೇಕೆಂದು ಹರಿಲಾಲ ಬಯಸುತ್ತಿದ್ದ, ಆದರೆ ಅವನು ಈ ಸ್ಥಿತಿಯಲ್ಲಿ ಹತಾಶೆಯಿಂದ ಶರಣಾಗತನಾಗಿ ಅಲ್ಲಿಗೆ ಹೋಗಲು ಸಿದ್ಧನಿರಲಿಲ್ಲ.

ಹರಿಲಾಲ ಈ ಹತಾಶ ಭಾವನೆ ಮತ್ತು ಬಲಿ ಬಹನಳ ಮೇಲಿದ್ದ ಸಿಟ್ಟನ್ನು ಅಂದು ರಾತ್ರಿ ಸಾರಾಯಿ ಬಾಟಲಿಯನ್ನು ಖಾಲಿ ಮಾಡಿ ನೀಗಿಸಿಕೊಂಡ. ಸಾರಾಯಿ ಕುಡಿದ ನಂತರ ಅವನ ಕಣ್ಣುಗಳು ಕೆಂಪಗಾದವು, ಈಗ ಹರಿಲಾಲ ಬಲಿ ಬಹನಳಿಂದ ತನ್ನ ಮಕ್ಕಳನ್ನು ಮರಳಿ ಕರೆತರಲು ವ್ಯಗ್ರನಾದ. ಅವನು ಮುಷ್ಟಿಗಳನ್ನು ಕಟ್ಟಿದ. ತುಟಿಗಳನ್ನು ಕಚ್ಚಿಕೊಂಡ, 'ಮನು ಬಚ್ಚಿ... ಮನು ಬಚ್ಚಿ...ನೀನು ನನ್ನೊಂದಿಗೇ ಇರಬೇಕು... ಕಾಂತಿಯನ್ನು ನಾನು ಡಾಕ್ಟರ್ ಮಾಡುತ್ತೇನೆ... ಬ್ಯಾರಿಸ್ಟರ್ ಮಾಡುತ್ತೇನೆ...ಬಾಪೂಗಿಂತಲೂ ದೊಡ್ಡ...'

ಹರಿಲಾಲ ತುಂಬಾ ಹೊತ್ತು ಬಡಬಡಿಸುತ್ತಿದ್ದ. ನಂತರ ಚೀಲದಿಂದ ಒಂದು ಚಿಕ್ಕ ಶಾಲನ್ನು ಹೊರ ತೆಗೆದು ಹೆಗಲ ಮೇಲೆ ಹಾಕಿಕೊಂಡ. ಕೋಟಿನ ತೋಳುಗಳನ್ನು ಸರಿಸಿ ಮೇಲಕ್ಕೆತ್ತಿಕೊಂಡ, ನಂತರ ಕಾಲುಗಳಿಗೆ ಚಪ್ಪಲಿಗಳನ್ನು ಸಿಗಿಸಿಕೊಂಡ.

* * *

ಹರಿಲಾಲ ಬಲಿ ಬಹನಳ ಮನೆಗೆ ಹೋದಾಗ, ಇಡೀ ರಾಜಕೋಟ ಸುಮಾರಾಗಿ ಶಾಂತವಾಗಿತ್ತು. ಎಲ್ಲರೂ ನಿದ್ರಿಸುತ್ತಿದ್ದರು. ಮಾರ್ಗದುದ್ದಕ್ಕೂ ಹರಿಲಾಲ ಮನಸ್ಸಿನಲ್ಲಿ ಬಲಿ ಬಹನಳಿಗೆ ಶಾಪವನ್ನು ಹಾಕುತ್ತಿದ್ದ. ತುಂಬಾ ದಿನಗಳ ನಂತರ ಮಕ್ಕಳನ್ನು ಭೇಟಿಯಾಗುವ ತೀವ್ರ ಇಚ್ಛೆಯ ಜಾಗವನ್ನು ಈಗ ರೋಷ ಆಕ್ರಮಿಸಿತ್ತು. ಅವನು ಪದೇ ಪದೇ ಮುಷ್ಟಿಯನ್ನು ಕಟ್ಟುತ್ತಿದ್ದ. ತುಟಿಗಳನ್ನು ಕಚ್ಚಿಕೊಳ್ಳುತ್ತಿದ್ದ. ಹೆಗಲ ಮೇಲೆ ಹೊದ್ದ ಶಾಲನ್ನು ತೆಗೆದು ಗಾಳಿಯಲ್ಲಿ ಕೊಡವುತ್ತಿದ್ದ. ಮಾರ್ಗದಲ್ಲಿ ಜನಸಂಚಾರ ಇರಲಿಲ್ಲ, ಪರಿಚಿತರು ಭೇಟಿಯಾಗುವ ಸಂಭವವಿರಲಿಲ್ಲ.

ಬಲಿ ಬಹನಳ ಮನೆಯಲ್ಲಿ ಸಹ ಎಲ್ಲರೂ ನಿದ್ರಿಸುತ್ತಿದ್ದರು. ಚಿಕ್ಕ ಮಗಳು ಮನು ಮಾತ್ರ ಬಲಿ ಬಹನಳ ಮನೆಯಲ್ಲಿದ್ದಳು, ಉಳಿದವರು ಬಾ ಮತ್ತು ಬಾಪೂ ಅವರೊಂದಿಗೆ ಸಾಬರಮತಿ ಆಶ್ರಮದಲ್ಲಿಯೇ ಇದ್ದರು. ಅಷ್ಟು ತಿಳಿವಳಿಕೆಯಿಲ್ಲದ ಮನುವಿನ ಕಿವಿಗಳಿಗೆ ತಂದೆಯ ಬಗ್ಗೆ ಅನೇಕ ಮಾತುಗಳು ಬಿದ್ದಿದ್ದವು. ಅದನ್ನು ಕೇಳಿ ಅವಳ ಕೋಮಲ ಹೃದಯಕ್ಕೆ ತುಂಬಾ ಆಘಾತವಾಗಿತ್ತು. ಬಾ ಮತ್ತು ಬಾಪೂ ಅವರಿಗಿದ್ದ ವಿಶ್ವವ್ಯಾಪಿ ಪ್ರಸಿದ್ಧಿ ಮತ್ತು ಅವರ ಅದ್ಭುತ ಜೀವನವನ್ನು ಅವಳು ತನ್ನ ಕಣ್ಣಾರೆ ಕಂಡಿದ್ದಳು. ಇವೆಲ್ಲದರ ನಡುವೆ ಅವಳು ತಂದೆಯ ಜೀವನದ ಬಗ್ಗೆ ಕೇಳಿದ ಮಾತುಗಳಿಂದ, ಅವಳಿಗೆ ತಂದೆಯ ಬಗ್ಗೆ ಭಯ ಮನೆ ಮಾಡಿತ್ತು; ಅವಳು ಸದಾ ಚಿಂತೆಯಲ್ಲಿರುತ್ತಿದ್ದಳು.

ಹರಿಲಾಲ ಶೂನ್ಯ ಗಲ್ಲಿಗೆ ಬಂದು ಬಲಿ ಬಹನಳ ಮನೆಯ ಬಾಗಿಲನ್ನು ತಟ್ಟಿದಾಗ ಬಲಿ ಬಹನ್ ಅರ್ಧ ನಿದ್ರೆಯನ್ನು ಪೂರೈಸಿದ್ದಳು. ಬಾಗಿಲು ಬಡಿದ ಶಬ್ದ ಕೇಳಿ ಅವಳು ಕೂಡಲೇ ಜಾಗ್ರತಗೊಂಡಳು. ದಣಿದಿದ್ದ ಮನು ಮಗ್ಗುಲಾಗಿ ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡಳು.

“ಯಾರು?” ಬಲಿ ಬಹನ್ ಬಾಗಿಲ ಸಮೀಪಕ್ಕೆ ಬಂದು ಮೆಲ್ಲನೆ ಕೇಳಿದಳು.

'ಬಾಗಿಲನ್ನು ತೆಗಿ, ಬಲಿ ಬಹನ್...ನಾನು... ಹರಿಲಾಲ ...' ಹರಿಲಾಲನ ಕಂಪಿಸುವ ಮತ್ತು ಭಾರವಾದ ಧ್ವನಿ ಕೇಳಿಸಿತು.

ಬಲಿ ಬಹನಳಿಗೆ ಆಶ್ಚರ್ಯದೊಂದಿಗೆ ಗಾಬರಿಯಾಯಿತು. ಮನು ಸಹ ಎದ್ದು ಬಂದು ಅವಳ ಪಕ್ಕದಲ್ಲಿ ನಿಂತಳು. ಧ್ವನಿ ಹರಿಲಾಲನದೇ ಆಗಿತ್ತು. ಬಲಿ ಬಹನ್ ತಡಬಡಿಸುತ್ತಾ ಬಾಗಿಲನ್ನು ಅರ್ಧ ತೆರೆದಳು. ಹೊರಗೆ ಹರಿಲಾಲ ಕಂಬವೊಂದರ ಆಸರೆ ಹಿಡಿದು ನಿಂತಿದ್ದ. ಅವನ ಕೈ ಈಗಲೂ ಸಹ ಬಾಗಿಲ ಚಿಲಕದ ಮೇಲಿತ್ತು.

'ಹರಿಲಾಲ್! ನೀವು ಈಗ ಇಲ್ಲಿಗೆ ಎಲ್ಲಿಂದ ಬಂದಿರಿ? ಅದೂ ಈ ವೇಷದಲ್ಲಿ?' ಬಲಿ ತುಂಬಾ ಕಳವಳದಿಂದ ಕೇಳಿದಳು, 'ನಿಮ್ಮ ಆರೋಗ್ಯ ಚೆನ್ನಾಗಿದೆಯಲ್ಲ? ಒಳಗೆ ಬನ್ನಿ'

ಈ ನಡುವೆ ಮನು ಓಡಿ ಬಾಗಿಲ ಬಳಿಗೆ ಬಂದಳು. ತಂದೆಯ ಬಟ್ಟೆಗಳು ಹಾಗೂ ಅವರ ಪರಿಸ್ಥಿತಿಯನ್ನು ನೋಡಿ ಅವಳಿಗೆ ಅತೀವ ದುಃಖವಾಯಿತು. ತಂದೆಯ ಕೆಂಪಾದ ಕಣ್ಣುಗಳು, ಊದಿದ ದವಡೆ ಮತ್ತು ಗಲ್ಲಗಳ ಮೇಲಿದ್ದ ಕಪ್ಪು ಕಲೆಗಳನ್ನು ನೋಡಿ ಅವಳು ಭಯದಿಂದ ಕಂಪಿಸುತ್ತಾ ಚಿಕ್ಕಮ್ಮನನ್ನು ಅಪ್ಪಿಕೊಂಡಳು.

(ಸಶೇಷ)